**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**Spl.C.NDPS.5/2020**

| | | |
|---|---|---|
| ಸಾಕ್ಷಿದಾರರ ಹೆಸರು | : | ಮುಸ್ತಕ್ ಅಹಮ್ಮದ್ |
| ತಂದೆಯ ಹೆಸರು | : | ದಸ್ತಗಿರ್ ಸಾಬ್ |
| ವಯಸ್ಸು | : | 52 ವರ್ಷ |
| ಉದ್ಯೋಗ | : | ಪೊಲೀಸ್ ಇನ್ಸಪೆಕ್ಟರ್, ಲೋಕಾಯುಕ್ತ ಪೊಲೀಸ್ ಠಾಣೆ, ಚಿತ್ರದುರ್ಗ |
| ವಾಸ ಸ್ಥಳ | : | ಚಿತ್ರದುರ್ಗ |

ಪಿ.ಡಬ್ಲ್ಯೂ 1

ಸಿ.ಡಬ್ಲ್ಯೂ 1

ದಿ: 19-09-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

1. ಅಕ್ಟೋಬರ್ 2019 ರಿಂದ ಅಕ್ಟೋಬರ್ 2020 ರವರೆಗೆ ನಾನು ದಾವಣಗೆರೆಯ CEN ಪೊಲೀಸ್ ಠಾಣೆಯಲ್ಲಿ ಪಿ.ಐ. ಆಗಿ ಕೆಲಸ ಮಾಡಿದ್ದೇನೆ. ದಿಃ 05-11-2019 ರಂದು ಬೆಳಿಗ್ಗೆ 9.00 ಗಂಟೆಗೆ ನಾನು CEN ಪೊಲೀಸ್ ಠಾಣೆಯಲ್ಲಿ ಇದ್ದಾಗ ದಾವಣಗೆರೆ ನಗರದ ಬಿ.ಐ.ಟಿ. ಕಾಲೇಜಿನ ಹಾಸ್ಟೇಲ್ ನ ಮುಂಭಾಗದ ಸ್ವಾಮಿವಿವೇಕನಂದ ಬಡಾವಣೆಯಲ್ಲಿರುವ ನೂತನ್ ಕಾಲೇಜ್ ರಸ್ತೆ ಪಕ್ಕದ 3 ನೇ ಮೇನ್ ರಸ್ತೆಯಲ್ಲಿ ಯಾರೋ ಒಬ್ಬ ವ್ಯಕ್ತಿ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದಾನೆ ಅಂತ ಬಾತ್ಮಿದಾರರಿಂದ ಮಾಹಿತಿ ಬಂದಿದ್ದು, ಈ ಮಾಹಿತಿಯನ್ನು ಠಾಣಾ ದಿನಚರಿಯಲ್ಲಿ ನಮೂದು ಮಾಡಿ, ಮೇಲಾಧಿಕಾರಿಗಳಾದ ಎಸ್.ಪಿ. ರವರಿಗೆ ತಿಳಿಸಿ, ದಾಳಿ ಮಾಡಿ ಕ್ರಮ ಜರುಗಿಸಲು

ಅನುಮತಿ ಕೇಳಿಕೊಂಡು ಮನವಿಯನ್ನು ಠಾಣೆಯ ಸಿಬ್ಬಂದಿಯಾದ ಚಾಸಾ-19 ರವರ ಮುಖಾಂತರ ಎಸ್.ಪಿ. ರವರಿಗೆ ಕಳುಹಿಸಿ ಅನುಮತಿಯನ್ನು ಪಡೆದುಕೊಂಡಿರುತ್ತೇನೆ. ನಂತರ ಈ ಬಗ್ಗೆ ದೂರನ್ನು ತಯಾರಿಸಿ ದೂರನ್ನು ವಿದ್ಯಾನಗರ ಎಸ್.ಹೆಚ್.ಓ. ರವರಿಗೆ ನೀಡಿ, ಪ್ರಕರಣವನ್ನು ದಾಖಲಿಸಿರುತ್ತೇನೆ. ವಿದ್ಯಾನಗರ ಪೊಲೀಸ್ ಠಾಣೆ ಗುನ್ನಾ ನಂಬರ 138/2019 ರಲ್ಲಿ ಪ್ರಕರಣವನ್ನು ದಾಖಲಿಸಿದರು. ಎಸ್.ಪಿ. ರವರು ದಿಃ 05-11-2020 ರಂದು ಕಳುಹಿಸಿದ ಜ್ಞಾಪನವನ್ನು ನಿಪಿ-1 ಅಂತ, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಅಂತ ಗುರುತಿಸಲಾಯಿತು. ಸರ್ಕಾರಿ ತರ್ಫೆ ನಾನೇ ದೂರನ್ನು ಸಲ್ಲಿಸಿರುತ್ತೇನೆ. ಆ ದೂರನ್ನು ಈಗ ನೋಡುತ್ತಿದ್ದು, ನಿಪಿ-2 ಅಂತ, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಅಂತ ಗುರುತಿಸಲಾಯಿತು. ನಂತರ ಪ್ರಾಂಶುಪಾಲರು ಐ.ಟಿ.ಐ. ಕಾಲೇಜಿಗೆ ಪತ್ರ ಬರೆದು ಇಬ್ಬರು ಸರ್ಕಾರಿ ಪಂಚರನ್ನು ಮತ್ತು ಒಬ್ಬ ಪತ್ರಾಂಕಿತ ಅಧಿಕಾರಿಯನ್ನು ಕಳುಹಿಸಿಕೊಡುವಂತೆ ಕೋರಿಕೆಯ ಪತ್ರವನ್ನು ಠಾಣೆಯ ಸಿಬ್ಬಂದಿ ಚಾಸಾ-14 ರವರ ಮುಖಾಂತರ ಕಳುಹಿಸಿರುತ್ತೇನೆ. ಆ ಮನವಿ ಪತ್ರವನ್ನು ಈಗ ನೋಡುತ್ತಿದ್ದು, ನಿಪಿ-3 ಅಂತ, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಅಂತ ಗುರುತಿಸಲಾಯಿತು. ಸದರಿ ಪ್ರಾಂಶುಪಾಲರು ರಮೇಶ ಮತ್ತು ಮಾರುತೇಶ (ಚಾಸಾ-3 ಮತ್ತು 4) ರವರನ್ನು ಪಂಚರಾನ್ನಾಗಿ ಮತ್ತು ಪತ್ರಾಂಕಿತ ಅಧಿಕಾರಿಯನ್ನಾಗಿ ಚಾಸಾ-2 ರವರನ್ನುನೇಮಕ ಮಾಡಿ ಕಳುಹಿಸಿಕೊಟ್ಟಿರುತ್ತಾರೆ. ನೇಮಕಾತಿ ಪತ್ರ ದಿಃ 05-11-2019 ಇದ್ದು ಅದನ್ನು ಈಗ ನೋಡುತ್ತಿದ್ದು, ನಿಪಿ-4 ಅಂತ, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಅಂತ ಗುರುತಿಸಲಾಯಿತು. ಅದರಂತೆ ಚಾಸಾ-2 ರಿಂದ 4 ರವರು ಠಾಣೆಗೆ ಬೆಳಿಗ್ಗೆ 10.00 ಗಂಟೆಗೆ ಹಾಜರಾಗಿದ್ದು, ಅವರಿಗೆ ನಮ್ಮ ಮತ್ತು ಸಿಬ್ಬಂದಿಯ ಪರಿಚಯ ಮಾಡಿಸಿ ಪ್ರಕರಣದ ಮಾಹಿತಿಯನ್ನು ತಿಳಿಸಿ ಪಂಚರಾಗಿ ಸಹಕರಿಸಲು ಕೇಳಿಕೊಂಡಿರುತ್ತೇನೆ. ಅದಕ್ಕೆ ಅವರು ಒಪ್ಪಿಕೊಂಡಿರುತ್ತಾರೆ. ಮೂವರಿಗೆ ನಾನು ಕೊಟ್ಟ ನೋಟಿಸ್ಸಗಳನ್ನು ನೋಡುತ್ತಿದ್ದು, ನಿಪಿ-5 ರಿಂದ 7 ಅಂತ, ಸಾಕ್ಷಿಯ ಸಹಿಗಳನ್ನು ನಿಪಿ-5(ಎ) ದಿಂದ 7(ಎ) ಅಂತ ಗುರುತಿಸಲಾಯಿತು. ನಂತರ ಠಾಣೆಯ ಸಿಬ್ಬಂದಿಯಾದ ಚಾಸಾ-22, ಚಾಸಾ-18, ಚಾಸಾ-12 ರಿಂದ 16 ಮತ್ತು 19 ರವರಿಗೂ ಸಹ ದಾಳಿಯ ಬಗ್ಗೆ ಮಾಹಿತಿಯನ್ನು ತಿಳಿಸಿ, ಸರ್ಕಾರಿ

ಜೀಪಿನಲ್ಲಿ ಹಾಗೂ ಖಾಸಗಿ ಕಾರ್ ನ ನಂಬರ ಕೆ.ಎ. 17 ಸಿ. 5058 ನೇದರಲ್ಲಿ ಪಂಚರು, ಸಿಬ್ಬಂದಿಗಳು ಮತ್ತು ಠಾಣೆಯಿಂದ ಲ್ಯಾಪಟಾಪ್, ತನಿಖಾ ಕಿಟ್, ಪ್ರಿಂಟರ್, ತೂಕದ ಯಂತ್ರ ಹಾಗೂ ಇತರ ಸಲಕರಣೆಗಳನ್ನು ತೆಗೆದುಕೊಂಡು ಠಾಣೆಯನ್ನು ಬೆಳಿಗ್ಗೆ 10.15 ಗಂಟೆಗೆ ಬಿಟ್ಟು, ಮಾಹಿತಿ ಬಂದ ಸ್ಥಳಕ್ಕೆ ಹೋಗಿ 10.20 ಗಂಟೆಗೆ ತಲುಪಿದೆವು. ನಮ್ಮ ವಾಹನಗಳನ್ನು ಸ್ವಲ್ಪ ದೂರದಲ್ಲಿ ಮರೆಯಲ್ಲಿ ನಿಲ್ಲಿಸಿದೆವು. ನಂತರ ಪಂಚರ ಸಮಕ್ಷಮ ನಾವು ಮತ್ತು ಸಿಬ್ಬಂದಿಗಳು ಪರಸ್ಪರ ಅಂಗ ಶೋಧನೆ ಮಾಡಿಕೊಂಡು ನಮ್ಮ ಬಳಿ ಯಾವುದೇ ಗಾಂಜಾಗೆ ಸಂಬಂಧಪಟ್ಟ ವಸ್ತುಗಳು ಇಲ್ಲ ಅಂತ ಖಚಿತಪಡಿಸಿಕೊಂಡೆವು. ಮರೆಯಲ್ಲಿ ನಿಂತು ನೂತನ್ ಕಾಲೇಜ್ ಪಕ್ಕದ 3 ನೇ ಮೇನ್ ರಸ್ತೆಯನ್ನು ನೋಡಲಾಗಿ ಅಲ್ಲಿ ಒಬ್ಬ ವ್ಯಕ್ತಿ ನಿಂತುಕೊಂಡಿದ್ದು, ಅವನ ಕೈಯಲ್ಲಿ ಒಂದು ಬಟ್ಟೆ ಚೀಲ ಇತ್ತು. ಗಿರಾಕಿಯನ್ನು ಕಾಯುತ್ತಿರುವಂತೆ ವರ್ತನೆ ಕಂಡು ಬಂತು. ನಾವು ಅವನ ಹತ್ತಿರ ಹೋಗುತ್ತಿರುವಂತೆ ನಮ್ಮನ್ನು ಓಡಿ ಹೋಗಲು ಪ್ರಾರಂಭಿಸಿದನು. ಸಿಬ್ಬಂದಿ ಮುಖಾಂತರ ಅವನನ್ನು ಹಿಂಬಾಲಿಸಿ ಅವನನ್ನು ವಶಕ್ಕೆ ತೆಗೆದುಕೊಂಡೆವು. ಆಗ ಸಮಯ ಬೆಳಿಗ್ಗೆ 10.30 ಗಂಟೆ ಆಗಿತ್ತು.

ಈ ಹಂತದಲ್ಲಿ ಸಮಯ ಕೋರಿರುವುದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.